| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
|---|---|
| ಸಿ.ಸಿ. ನಂ.**01/2021** | |
| ಚಾಸಾ - **22** | |
| ಪ್ರಾಸಾ - **18** | |
| ಸಾಕ್ಷಿದಾರರ ಹೆಸರು | ರಾಜು ಸಿಂಗೆ |
| ತಂದೆ/ಗಂಡ/ತಾಯಿ ಹೆಸರು | ನಾಗಪ್ಪ |
| ವಯಸ್ಸು | **45** ವರ್ಷ |
| ಉದ್ಯೋಗ | ಎಚ್.ಸಿ. **1324** |
| ವಾಸಸ್ಥಳ | ಜಮಖಂಡಿ ನಗರ ಪೋಲಿಸ ಠಾಣೆ, ಜಮಖಂಡಿ |

ಸಾಕ್ಷಿಯನ್ನು ದಿನಾಂಕಃ-**28.02.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-

2017 ರಿಂದ 2022 ರವರೆಗೆ ಮುಖ್ಯ ಪೇದೆಯಾಗಿ ಜಮಖಂಡಿ ನಗರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕಃ 29-06-2018 ರಂದು ನಮ್ಮ ಠಾಣೆಯ ಚಾಸಾ-25 ರವರ ಆದೇಶದಂತೆ ನಾನು ಮತ್ತು ನಮ್ಮ ಠಾಣೆಯ ಪಿಸಿ ನಂ.1119 ರವರು ಸೇರಿ ನಮ್ಮ ಠಾಣೆಯ ಪ್ರಕರಣ ಸಂ.37/2018 ರಲ್ಲಿ ಆರೋಪಿತನನ್ನು ದಸ್ತಗಿರ ಮಾಡಿಕೊಂಡು ಬರಲು ಹೇಳಿದ್ದರ ಮೇರೆಗೆ ವಿಜಯಪುರದ ಸ್ವತಂತ್ರ ಯೋಧರ ಕಾಲೋನಿಗೆ ಹೋಗಿ ಆರೋಪಿಯ ಮನೆಯಲ್ಲಿ ಆತನನ್ನು ದಸ್ತಗೀರ ಮಾಡಿ, ಅದೇ ದಿನ ಬೆಳಿಗ್ಗೆ 11.00 ಗಂಟೆಗೆ ಚಾಸಾ-25 ರವರ ಮುಂದೆ ಹಾಜರಪಡಿಸಿದ್ದೇನೆ ಮತ್ತು ವರದಿಯನ್ನು ಕೊಟ್ಟಿದ್ದೇನೆ. ಸದರಿ ವರದಿಯನ್ನು ನಿಪಿ-28 ಎಂದು, ಸಾಕ್ಷಿಯ ಸಹಿಯನ್ನು ನಿಪಿ-28ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ-

ನಿಪಿ-28 ರಲ್ಲಿ ಯಾರು ಆದೇಶವನ್ನು ಕೊಟ್ಟಿದ್ದರು ಎಂದು ನಮೂದಿಸಿಲ್ಲ ಎಂದರೆ ಸರಿ. ನನ್ನೊಂದಿಗೆ ಪಿಸಿ ಸಂ.1119 ರವರು ಸಹ ಬಂದಿದ್ದರು ಎಂದು ನಮೂದಿಸಿಲ್ಲ ಎಂದರೆ ಸರಿ. ಆರೋಪಿಯನ್ನು ವಿಜಯಪುರದ ಆತನ ಮನೆಯಿಂದ ದಸ್ತಗೀರ ಮಾಡಿಕೊಂಡು ಬಂದು ಚಾಸಾ-25 ರವರ ಮುಂದೆ ಹಾಜರಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಸಾಕ್ಷಿಯ ಸಹಿ

ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

| | |
|---|---|
| **ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.** | |
| ಸಿ.ಸಿ. ನಂ.**01/2021** | |
| ಚಾಸಾ - **25** | |
| ಪ್ರಾಸಾ - **19** | |
| ಸಾಕ್ಷಿದಾರರ ಹೆಸರು | ಗೋವಿಂದಗೌಡ ಪಾಟೀಲ |
| ತಂದೆ/ಗಂಡ/ತಾಯಿ ಹೆಸರು | ಶಿವನಗೌಡ |
| ವಯಸ್ಸು | **41** ವರ್ಷ |
| ಉದ್ಯೋಗ | ಪಿಎಸ್ಐ, ಕುಲಗೋಡ ಪೋಲಿಸ ಠಾಣೆ |
| ವಾಸಸ್ಥಳ | ಕುಲಗೋಡ |

ಸಾಕ್ಷಿಯನ್ನು ದಿನಾಂಕಃ**-28.02.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-

ದಿನಾಂಕಃ 14-10-2019 ರಿಂದ 05-09-2021 ರವರೆಗೆ ಜಮಖಂಡಿ ನಗರ ಠಾಣೆಯಲ್ಲಿ ಪಿಎಸ್ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕಃ 20-10-2019 ರಂದು ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ-24 ರವರಿಂದ ವಹಿಸಿಕೊಂಡಿದ್ದೇನೆ. ದಿನಾಂಕಃ 04-09-2020 ರಂದು ಎಸ್.ಬಿ.ಐ. ಬ್ಯಾಂಕಿನ ಮ್ಯಾನೇಜರ ರವರ ಕಡೆಯಿಂದ ಈ ಕೇಸಿಗೆ ಸಂಬಂಧಪಟ್ಟಂತಹ 20 ಪುಟಗಳ ಬ್ಯಾಂಕ್ ಸ್ಟೇಟಮೆಂಟ್ ನ್ನು ಪಡೆದುಕೊಂಡಿದ್ದೇನೆ. ಸದರಿ ಬ್ಯಾಂಕ್ ಸ್ಟೇಟಮೆಂಟನ್ನು ನಿಪಿ-29 ಎಂದು, ಸಾಕ್ಷಿಯ ಸಹಿಯನ್ನು ನಿಪಿ-29ಎ ಎಂದು ಗುರುತಿಸಲಾಯಿತು. ಚಾಸಾ-1 ರವರ ಮರು ಹೇಳಿಕೆ ಪಡೆದುಕೊಂಡಿದ್ದೇನೆ. ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷಾಧಾರಗಳು ಕಂಡುಬಂದಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ-

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣ ಇಲ್ಲದ್ದರಿಂದ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಸಾಕ್ಷಿಯ ಸಹಿ

ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.